

ಹೊಡೆದುಕೊಳ್ಳತೊಡಗಿತ್ತು. ನಿದ್ದೆ ಮಾಡಲು ಬಿಟ್ಟಿರಲಿಲ್ಲ. ಎತ್ತಬಾರದು ಎಂದು ಶಮಿ ಗಟ್ಟಿಮನಸ್ಸು ಮಾಡಿಕೊಂಡಿದ್ದರೂ ರಿಂಗ್ ಟೋನಿನಿಂದಲೇ ಸತಾಯಿಸುತ್ತಿತ್ತು. ಕೊನೆಗೆ ಎತ್ತಿ ಆಲಿಸಿದ್ದ. ಅದು ಹೆಂಗಸಿನ ಧ್ವನಿ. ಉತ್ತರಕ್ಕಾಗಿ ಕಾದು, ಫೋನ್ ಇಟ್ಟು ಮತ್ತೆ ಫೋನ್ ಮಾಡುತ್ತಿದ್ದಳು. ಕನಿಷ್ಠ ಎಂಟು ಹತ್ತು ಸಲವಾದರೂ ಮಾಡಿರಬಹುದು. ಶಮಿಯೂ ಮಾತನಾಡುವಂತಿರಲಿಲ್ಲ. ಕೊನೆಕೊನೆಯಲ್ಲಿ ಅವಳಿಗೆ ಸಿಟ್ಟು ಮತ್ತು ದುಃಖ ಒತ್ತರಿಸಿ ಬಂದಿರಬೇಕು. ಶಮಿ ಉಸಿರೂ ಹೊರಬರದ ಹಾಗೆ ಸುಮ್ಮನಿದ್ದರೂ ಮಾತನಾಡುತ್ತಲೇ ಇದ್ದಳು:

"ಎಷ್ಟು ದಿನ ಆಯ್ತು ನಿನ್ನ ದನಿ ಕೇಳಿ? ನಿನ್ನ ಫೋನಿಗಾಗಿ ಕಾದುಕಾದು ಸೋತುಹೋದೆ. ಗೊತ್ತು, ನನಗೆ ನೀನು ಅಲ್ಲಿಯೇ ಇದ್ದಿ ಅಂತ. ಏನಾದರೂ ಮಾತನಾಡು, ಒಮ್ಮೆ ವಾಪಸು ಬಾ, ಬೇರೆ ಎಲ್ಲ ಸಮಸ್ಯೆಗಳೂ ತಾವಾಗಿ ಕರಗಿಹೋಗುತ್ತವೆ. ನಾನು ಬಗೆಹರಿಸುತ್ತೇನೆ."

ಕೊನೆಗೆ, ಶಮಿಯ ಹತಾಶೆ ಅರಿವಾದವಳ ಹಾಗೆ ಅವಳು ಹಠಾತ್ತನೆ ಫೋನ್ ಕುಕ್ಕಿದ್ದಳು. ಅವಳು ಹೇಳದೇ ಉಳಿದ ಮಾತುಗಳೂ ಕಿವಿಗಪ್ಪಳಿಸಿ ಶಮಿಯೂ ದುಃಖಿತನಾಗಿದ್ದ. ಸುಪ್ತ ಧ್ವನಿಗಳನ್ನು ಆಲಿಸುವ ತನ್ನ ಕಿವಿಗಳನ್ನು, ಅದೃಶ್ಯ ಚಿತ್ರಗಳನ್ನು ಕಾಣಿಸುವ ಕಣ್ಣುಗಳನ್ನು